**(ಇಂದು ದಿಃ 07-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ-ಶ್ರೀ.SKD ವಕೀಲರಿಂದಃ-**

ಅಸಲು ದಾವಾ ನಂಬರ 75/1998 ಅನ್ನು ಕಮಲಮ್ಮ, ದೊಡ್ಡ ಹನುಮಂತ ಮತ್ತು ಸಣ್ಣ ಹನುಮಂತರವರು ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯರು ಮತ್ತು ಅವರ ತಾಯಿ ರಾಮಕ್ಕರವರ ವಿರುದ್ದ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿನ ವಾದ ಪತ್ರವನ್ನು ನ್ಯಾಯಾಲಯಕ್ಕೆ ಹಣಕಾಸಿನ ವ್ಯಾಪ್ತಿ ಇಲ್ಲ ಎಂದು ವಾದಿಯರಿಗೆ ಮಾರಳಿ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ, ತದಾನಂತರ ಸದರಿ ವಾದ ಪತ್ರವನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ತದಾನಂತರ ವಾದಿಯರು ಮುಂದಿನ ಕ್ರಮ ಕೈಗೊಳ್ಳದ ಕ್ಾರಣ ಸದರಿ ದಾವೆ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ, ತದಾನಂತರ ಮತ್ತೆ ಅಸಲು ದಾವಾ ನಂಬರ 106/2005 ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ, ಅಸಲು ದಾವಾ 106/2005 ರಲ್ಲಿ ನಾನು 3 ನೇ ವಾದಿ ಎಂದರೆ ಸರಿ. ಈ ದಾವೆಯಲ್ಲಿ ಕೂಡ ನಾನು ವಾದಿ ಎಂದರೆ ಸರಿ. ಸದರಿ ದಾವೆಯಿನ್ನು ನಾವು ಇದೆ ದಾವಾ ಸ್ವತ್ತಿನ ಸಂಬಂಧ ಮಾಲಿಕತ್ವ ಘೋಷಣೆ ಮತ್ತು ನಿರ್ಬಂದಕಾರಣೆ ಕೋರಿ ಸಲ್ಲಿಸಿದ್ದೇವು ಎಂದರೆ ನನಗೆ ಗೊತ್ತಿಲ್ಲ.ಸದರಿ ಅಸಲು ದಾವಾ ನಂಬರ 75/1998 ಮತ್ತು 106/2005 ರಲ್ಲಿ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಅಸಲು ದಾವ ನಂಬರ 106/2005 ರಲ್ಲಿ ನನ್ನ ತಾಯಿ ಕಮಲಮ್ಮ ಮತ್ತು ರಾಮು ನಾಯಕರವರ ಸಾಕ್ಷಿ ವಿಚಾರಣೆ ಮಾಡಿಸಿದ್ದೇವು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಗೆ ಈ ದಾವೆಯ ವಾದ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರು ಸಹಿ ನನ್ನದು ಎಂದು ಗುರುತಿಸಿದ್ದಾರೆ . ಸಾಕ್ಷಿ ಗೆ ಅಸಲು ದಾವಾ ನಂಬರ 106/2005 ರಲ್ಲಿನ ವಾದ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ 3 ನೇ ವಾದಿಯಾಗಿ ಸಹಿ ಮಾಡಿರುವ ಸಹಿ ನನ್ನದು ಎಂದು ಗುರುತಿಸಿರುತ್ತಾರೆ. ಸದರಿ ವಾದ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಅಸಲು ದಾವಾ ನಂಬರ 106/2005 ಸಾಕ್ಷಿ ವಿಚಾರಣೆ ಮತ್ತು ಅಂತೀಮ ವಿಚಾರಣೆ ನಂತರ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ

ತದಾನಂತರ ಕಲಬುರಗಿಯ ತ್ವರಿತ ಗತಿಯ ನ್ಯಾಯಾಲಯದಲ್ಲಿ RA No.203/2008 ನ್ನು ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿಗೆ ಅಸಲು ದಾವಾ ನಂಬರ 106/2005 ರಲ್ಲಿನ ತೀರ್ಪು ಮತ್ತು ಡಿಕ್ರಿ ತೋರಿಸಲಾಗಿ ಸಾಕ್ಷಿ ಆದೇಶ ಆಗಿದ್ದು ನಿಜ ಎಂದು ಹೇಳಿದ್ದು , ಸದರಿ ತೀರ್ಪುನ್ನು ನಿಡಿ-2 ಎಂದು , ಡಿಕ್ರಿ ಯನ್ನು ನಿಡಿ-3 ಎಂದು ಗುರುತಿಸಲಾಯಿತು. RA No.203/2008 ರ ತೀರ್ಪನ್ನು ತೋರಿಸಲಾಗಿ ಅದು ವಜಾ ಆಗಿದ್ದು ಎಂದು ಹೇಳಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ತದಾನಂತರ ಮಾನ್ಯ ಉಚ್ಚನ್ಯಾಯಾಲಯದಲ್ಲಿ RSA NO.7436/2013 ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲು ದಿನಾಂಕ 07.02.2022 ಕ್ಕೆ ಕ್ರಮ ತೆಗೆದುಕೊಳ್ಳಲದ ಕಾರಣ ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ.

ದಾವ ಭೂಮಿಯಿನ್ನು ನರಸಪ್ಪ ಸ್ವಯಾರ್ಜಿತವಾಗಿ ಸಂಪಾಧನೆ ಮಾಡಿದ್ದರು ಎಂದರೆ ಸರಿ. ರಾಮಕ್ಕ ನರಸಪ್ಪನ ಮಗಳು. ನರಸಪ್ಪ ನನಗೆ ತಾತ ಆಗಬೇಕು. ನರಸಪ್ಪ ರಾಮಕ್ಕರವರನ್ನು ಮದುವೆ ಮಾಡಿ ಕೊಟ್ಟಾಗ ದಾವಾ ಭೂಮಿಯನ್ನು ಅವಳಿಗೆ ದಾನ ಮಾಡಿದರು ಎಂದರೆ ಸರಿಯಲ್ಲ. ದಾನ ಪತ್ರ ಆದ ನಂತರ ದೊಡ್ಡ ರಾಮಪ್ಪ ತೀರಿ ಕೊಳ್ಳುವ 10 ವರ್ಷ ಮುಂಚೆ ನನ್ನ ತಂದೆ ಸಣ್ಣ ರಾಮಪ್ಪ ತೀರಿ ಹೋದರು ಎಂದರೆ ಸರಿ.ದೊಡ್ಡ ರಾಮ್ಪ ಬದುಕಿದ್ದಾಗ ರಾಮಕ್ಕನ ಹೆಸರಿಗೆ ಮುಟೇಷನ್ ಆಗಿತ್ತು ಎಂದರೆ ಸರಿಯಲ್ಲ. ಸದರಿ ಮುಟೇಷನ್ ಆಗುವಾಗ ದೊಡ್ಡ ರಾಮಪ್ಪ ಮತ್ತು ಸಣ್ಣ ರಾಮಪ್ಪ ಇಬ್ಬರು ಒಪ್ಪಿಗೆ ಕೊಟ್ಟದ್ದರು ಎಂದರೆ ಸರಿಯಲ್ಲ. ದಾನ ಮತ್ತು ಅಂದರ ಪ್ರಕಾರ ಮುಟೇಷನ ಆದ ನಂತರ ಅದಿನಿಂದ ರಾಮಕ್ಕ ತೀರಿ ಹೋಗುವರೆಗೆ ದಾವಾ ಸ್ವತ್ತಿಗೆ ಮಾಲೀಕರಾಗಿ ಕಬ್ಜಾದಲ್ಲಿದ್ದರು ಎಂದರೆ ಸರಿಯಲ್ಲ. ರಾಮಕ್ಕನ ಹೆಸರ ಮೇಲೆ ಮುಟೇಷನ ಆದನಂತರ ದೊಡ್ಡ ರಾಮಣ್ಣ , ಸಣ್ಣ ರಾಮಣ್ಣ ಅಥವ ಕಮಲಮ್ಮ ಸದರಿ ಮುಟೇಷನನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ತದಾನಂತರ ಈಶ್ವರಪ್ಪ ಮತ್ತು ಶ್ರೀಶೈಲ ದಾವಾ ಸ್ವತ್ತಿನಲ್ಲಿ ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ತನ್ನ ಹೆಸರಿಗೆ ಜಮೀನು ಆದಾಗಿನಿಂದ ರಾಮಕ್ಕ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹೆಣ್ಣು ಮಗಳಿಗೆ ಯಾವುದೇ ಸಂಬಂಧ ಇಲ್ಲ ಗಂಡು ಮಕ್ಕಳಿಗೆ ಮಾತ್ರ ಸಂಬಂದ.

ಇವತ್ತಿನವರೆಗೆ ನಮ್ಮ ಹೆಸರಿನಲ್ಲಿ ಪಹಣಿಗಳು ಇಲ್ಲ ಎಂದರೆ ಸರಿ . ಸಾಕ್ಷಿ

ಮುಂದುವರೆದು ಅದೇ ಕಾರಣಕ್ಕೆ ದಾವೆ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಸಾಕ್ಷಿ ಗೆ ಅಸಲುದಾವಾ ನಂಬರ 106/2005 ರಲ್ಲಿನ ಕಮಲಮ್ಮ ರವರ ಸಾಕ್ಷಿ ವಿಚಾರಣೆ ತೋರಿಸಲಾಗಿ ಅವಳು ಸಾಕ್ಷಿ ಹೇಳಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

**(ಪ್ರತಿವಾದಿಯರ  ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**